INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -01,January-February, 2026
Page No,01-08
Peer -Reviewed, Refereed Journal

# ನಶಿಸಿಹೋಗುತ್ತಿರುವ ಮಲೆನಾಡಿನ ಅಭೇದ್ಯ ಕೋಟೆ – ಕವಲೇದುರ್ಗ

ಡಾ.ಮಲ್ಲೇಶ.ಎಂ.[1]

ಮಲೆನಾಡಿನ ಹೆಬ್ಬಾಗಿಲು ಸಹ್ಯಾದ್ರಿಯ ಒಡಲು ಜಲಪಾತಗಳ ಮಡಿಲು ನಿಸರ್ಗದ ಕಡಲು ಆದಂತಹ ಶಿವಮೊಗ್ಗ ಜಿಲ್ಲೆಯು ಕರ್ನಾಟಕದ ಅನೇಕ ರೋಚಕಗಳನ್ನು ಹೊಂದಿರುವ ರಮಣೀಯ ಜಿಲ್ಲೆ. ಈ ಜಿಲ್ಲೆಯಲ್ಲಿ ಅನೇಕ ಐತಿಹಾಸಿಕ ಕೋಟೆಗಳು, ದೇವಾಲಯಗಳು, ಚಾರಿತ್ರಿಕ ತಾಣಗಳು, ಭವ್ಯವಾದ ಸ್ಮಾರಕಗಳಿವೆ. ಈ ಐತಿಹಾಸಿಕ ಸ್ಮಾರಕಗಳಲ್ಲಿ ಶಿವಮೊಗ್ಗ ಜಿಲ್ಲೆಯ ಕವಲೇದುರ್ಗವು ತನ್ನದೆ ಆದಂತಹ ವಿಶಿಷ್ಟ್ಯತೆಯನ್ನು ಹೊಂದಿರುವಂತಹ ಪ್ರಮುಖ ಕೋಟೆಯಾಗಿದೆ. ಕವಲೇದುರ್ಗವು ಜಿಲ್ಲಾಕೇಂದ್ರದಿಂದ ಸುಮಾರು 80 ಕಿ.ಮೀ. ದೂರದಲ್ಲಿದೆ. ತೀರ್ಥಹಳ್ಳಿಯಿಂದ 18 ಕಿ.ಮೀ ತೀರ್ಥಹಳ್ಳಿ–ನಗರ ಮಾರ್ಗವಾಗಿ ಸಾಗುವಾಗ ದಟ್ಟ ಕಾನನದಿಂದ ಕೂಡಿದ ಸಹ್ಯಾದ್ರಿ ಶ್ರೇಣಿಯ ಅಂತರಾಳದ ಮಡಿಲಲ್ಲಿ ಕವಲೇದುರ್ಗವಿದೆ. ಕೆಳದಿ ಅರಸರ ಆಳ್ವಿಕೆಯ ಕೊನೆಯ ರಾಜಧಾನಿಯಾಗಿದ್ದು ಈ ಕೋಟೆಯ ವಿಶೇಷ. ಕೆಳದಿ ಅರಸರ ಆಡಳಿತದ ನಾಲ್ಕು ರಾಜಧಾನಿಗಳಲ್ಲಿ ಅತ್ಯಂತ ದುರ್ಗಮವಾದ ಸ್ಥಳವಿದು. ಈ ಕೋಟೆಯ ಸುತ್ತ ಸಹ್ಯಾದ್ರಿ ಪರ್ವತ ಶ್ರೇಣಿಯ ದಟ್ಟವಾದ ಕಾನನವಿದ್ದು, ನಿಸರ್ಗದ ಹೊದಿಕೆಯೊಂದಿಗೆ ಕಂಗೊಳಿಸುವ ಅದ್ಭುತ ಕೋಟೆಯಾಗಿದೆ.

**ಕವಲೇದುರ್ಗ ಕೋಟೆಯ ಪರಿಚಯ**

ಮಹಾಭಾರತದಲ್ಲಿ ವರ್ಣಿತವಾದ ಪಾಂಡವರ ವನವಾಸ ಮಾಡಿದ ಕಾಮ್ಯಕವನವೇ ಇಂದಿನ ಕವಲೇದುರ್ಗ ಕೋಟೆ. ದೌಮ್ಯ (ದ್ಯಮ್ನ) ಋಷಿಗಳು ಮತ್ತು ಇನ್ನಿತರೆ ಸಂತರು ತಪಸ್ಸುಗೈದ ಈ ತಪೋಭೂಮಿಯಲ್ಲಿ ಹೇರಳವಾಗಿ ಸ್ಥಳೀಯ ಕಪಿಲೆ ಅಂದರೆ ಕೌಲು ದನಗಳು ಮೇಯಲು ಬರುತ್ತಿದ್ದ ಕಾರಣಕ್ಕೆ ಇಲ್ಲಿ ನಿರ್ಮಿಸಿದ ಕೋಟೆಗೆ ಕಪಿಲೇದುರ್ಗ ಮತ್ತು ಕೌಲುದುರ್ಗ ಎಂಬ ಹೆಸರು ಪ್ರಚಲಿತವಾಗುತ್ತದೆ. ಇನ್ನೂ ಕವಿಲೆಗಳು ಎನ್ನುವ ಜಾತಿಯ ಹಸುಗಳು ಸಹಾ ಇಲ್ಲಿ ವಾಸಿಸುತ್ತಿದ್ದ ಕಾರಣಕ್ಕೆ ಈ ಕೋಟೆಗೆ ಕವಿಲೇದುರ್ಗ ಎಂಬ ಹೆಸರು ಸಹಾ ಬಂದಿದೆ. ಕವಲೇದುರ್ಗ ಕೋಟೆಯು ಕೆಳದಿ ಸಂಸ್ಥಾನದ ಅನೇಕ ಐತಿಹ್ಯ ಹಾಗೂ ಅಂದಿನ ವಾಸ್ತುಶಿಲ್ಪ ಕಲೆ ಮತ್ತು ಸಂಸ್ಕೃತಿಗಳಿಗೆ ಇಂದು

[1]. ಅತಿಥಿ ಅಧ್ಯಾಪಕರು, ಇತಿಹಾಸ ವಿಭಾಗ, ಶ್ರೀಮದ್‌ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಕುವೆಂಪು ವಿಶ್ವವಿದ್ಯಾನಿಲಯ ಜ್ಞಾನ ಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ.

ಅಸ್ತಿತ್ವದಲ್ಲಿರುವ ಪ್ರಮುಖ ಸಾಕ್ಷಿಯಂತಿದೆ. ಈ ಕೋಟೆಯನ್ನು ಕೆಡಸು ಕಲ್ಲು (ಗ್ರಾನೈಟ್) ಇಂದ ನಿರ್ಮಿಸಲಾಗಿದೆ.

ಕವಲೇದುರ್ಗವು ಹಿಂದೆ ಮಲ್ಲವ ಅರಸರ ಆಳ್ವಿಕೆಗೆ ಒಳಪಟ್ಟ ಸ್ಥಳವಾಗಿತ್ತು. ಕೆಳದಿ ಅರಸರು ಮೊದಲು ಕೆಳದಿ ಎಂಬಲ್ಲಿ ರಾಜ್ಯ ಸ್ಥಾಪಿಸಿ ನಂತರ ಇಕ್ಕೇರಿ ಬಿದನೂರಿನಲ್ಲಿ ಕೋಟೆಗಳನ್ನು ನಿರ್ಮಿಸಿ ರಾಜ್ಯಭಾರ ಮಾಡುತ್ತಿದ್ದರು. ಆಗ ಕವಲೆದುರ್ಗವು ತೊಲೆತಮ್ಮ ಮತ್ತು ಮುಂಡಿಗೆತಮ್ಮ ಎಂಬ ಪಾಳೆಗಾರ ಸಹೋದರರ ಸ್ವಾಧೀನದಲ್ಲಿದ್ದು ಈ ಸಹೋದರರನ್ನು ಸೋಲಿಸಿದ ಕೆಳದಿ ಅರಸರು ಕವಲೆದುರ್ಗ ಕೋಟೆಯನ್ನು ವಶಕ್ಕೆ ಪಡೆದು ಭುವನಗಿರಿ ದುರ್ಗಾ ಎಂದು ಹೆಸರಿಟ್ಟು ಆಳ್ವಿಕೆ ಆರಂಭ ಮಾಡಿದರು.

ಕೆಳದಿ ವಂಶದಲ್ಲಿ ಪ್ರಸಿದ್ಧರಾದವರೆಂದರೆ ಹಿರಿಯ ವೆಂಕಟಪ್ಪನಾಯಕ, ಸದಾಶಿವ ನಾಯಕ, ಶಿವಪ್ಪ ನಾಯಕ, ರಾಣಿ ಚೆನ್ನಮ್ಮಾಜಿ, ರಾಣಿ ಚೆನ್ನಮ್ಮಾಜಿಯು ಛತ್ರಪತಿ ಶಿವಾಜಿ ಮಹಾರಾಜರ ಮಗನಾದ ರಾಜಾರಾಮನಿಗೆ ಆಶ್ರಯ ನೀಡಿದ್ದು ಕವಲೇದುರ್ಗ ಸಂಸ್ಥಾನದಲ್ಲಿ ಎಂಬುದು ಚರಿತ್ರೆಯಲ್ಲಿ ದಾಖಲಾಗಿದೆ. ಯುದ್ಧ ಮಾಡಿ ಗೆದ್ದ ಕೀರ್ತಿ ರಾಣಿ ಚೆನ್ನಮ್ಮಾಜಿ ಅವರಿಗೆ ಸಲ್ಲುತ್ತದೆ. 18 ನೇ ಶತಮಾನದಲ್ಲಿ ಮೈಸೂರು ರಾಜ ಹೈದರಾಲಿ ಹಾಗೂ ಟಿಪ್ಪು ಸುಲ್ತಾನರ ದಾಳಿಗೆ ಗುರಿಯಾಗಿ ಕವಲೇದುರ್ಗ ಸಾಕಷ್ಟು ನಾಶವಾಯಿತು.

ಕವಲೇದುರ್ಗ ಕೋಟೆಯು 7 ಹಂತಗಳನ್ನು ಹೊಂದಿದ್ದು ದಟ್ಟವಾದ ಕಾಡುಗಳಿಂದ ಆವೃತವಾಗಿದೆ. ಇದು ಪರಿಪೂರ್ಣ ರಕ್ಷಣಾ ಕೋಟೆ ಎಂದು ಸಾಬೀತುಪಡಿಸುತ್ತದೆ. ಈ ಕೋಟೆ ಪ್ರದೇಶದೊಳಗೆ ನಿರ್ಮಿಸಲಾದ ಅನೇಕ ದೇವಾಲಯಗಳು ಇಂದಿಗೂ ಇವೆ. ಈಗ ಉಳಿದಿರುವ ಮೂರು ದೇವಾಲಯಗಳು ಕಾಶಿ ವಿಶ್ವನಾಥ ದೇವಾಲಯ, ಶಿಖರೇಶ್ವರ ದೇವಾಲಯ ಮತ್ತು ಲಕ್ಷ್ಮಿನರಸಿಂಹ ದೇವಾಲಯಗಳಾಗಿವೆ. ಕವಲೇದುರ್ಗ ಕೋಟೆಯು ಗಣನೀಯ ಪ್ರದೇಶವನ್ನು ಆವರಿಸಿಕೊಂಡಿದ್ದು, ಐದು ದ್ವಾರಗಳ ಮೂಲಕ ಹಾದುಹೋಗುವ ಮೆಟ್ಟಿಲುಗಳ ಮೂಲಕ ಪ್ರವೇಶಿಸಬಹುದಾದ ಮಾರ್ಗದಂತೆ ದೃಷ್ಟಿಕರಿಸಬಹುದು. ದಾಳಿಕೋರನಿಗೆ ಗರಿಷ್ಠ ಹಾನಿಯನ್ನು ಉಂಟು ಮಾಡಲು ಇವುಗಳನ್ನು ಬಲವಾಗಿ ಬಲಪಡಿಸಲಾಗಿತ್ತು. ಆದರೆ ಈಗ ಮೊದಲಾ ದ್ವಾರವನ್ನು ಪ್ರವೇಶಿಸಿದಾಗ ಸವೆದು ಹೋದ ಕೆತ್ತನೆಗಳು, ದೇವಾಲಯದ ಅವಶೇಷಗಳು ಶಿಥಿಲಗೊಂಡ ಕೊತ್ತಲಗಳು ಮತ್ತು ನಿಷ್ಕ್ರಿಯ ಬಂದೂಕು ಸೀಳುಗಳು ಎದುರಾಗುತ್ತವೆ. ಬೆಟ್ಟದ ಇಳಿಜಾರಿನಲ್ಲಿ ಮೇಲಕ್ಕೆ ತಿರುಗಿದಾಗ ಕಲ್ಲಿನಿಂದ ಸುಸಜ್ಜಿತವಾದ ಹಾದಿ ಇದ್ದು ಅದು ಶಿಥಿಲಗೊಂಡ ಕಾವಲುಗಾರರ ವಸತಿಗೃಹಗಳನ್ನು ದಾಟಿ ಎರಡನೇ ಮೂರನೇ ಮತ್ತು ನಾಲ್ಕನೇ ದ್ವಾರಗಳನ್ನು ದಾಟಿ ಹೋದರೆ ಕೋಟೆಯ ಪ್ರಮುಖ ಭಾಗದ ಅವಶೇಷಗಳನ್ನು ತಲುಪುಬಹುದು. ಕವಲೇದುರ್ಗ ಕೋಟೆಯ ನಾಲ್ಕನೇ ದ್ವಾರದ ನಂತರ ಹಲವಾರು ಅವಶೇಷಗಳಿಂದ ಕೂಡಿದ ವಿಶಾಲವಾದ ಮೈದಾನವಿದೆ. ಅದರಲ್ಲಿ ಕಾಶಿ ವಿಶ್ವನಾಥ ದೇವಾಲಯವು ಇನ್ನು ತನ್ನ ವೈಭವವನ್ನು

ಉಳಿಸಿಕೊಂಡಿದ್ದರು ಸಹ ಹಾಳಾಗುವ ಸ್ಥಿತಿಯಲ್ಲಿದೆ. ಎರಡು ಎತ್ತರದ ಕಂಬಗಳು ಅದರ ಅಂಗಳದಲ್ಲಿ ಸ್ಥಿರವಾಗಿ ನಿಂತಿವೆ. ಇದು ಕೆಳದಿ ರಾಜರ ಆಳ್ವಿಕೆಯ ಕಾಲದ ದೇವಾಲಯ ವಾಸ್ತುಶಿಲ್ಪದ ವೈಭವವನ್ನು ಪ್ರದರ್ಶಿಸುತ್ತದೆ. ಇದರ ರಕ್ಷಣೆಯ ಕಾರ್ಯವಾಗಬೇಕು. ಆಗ ಮಾತ್ರ ಈ ದೇವಾಲಯ ತನ್ನ ಹಳೇಯ ವೈಭವವನ್ನು ಉಳಿಸಿಕೊಳ್ಳುತ್ತದೆ.

*** ಕಾಶಿ ವಿಶ್ವನಾಥ ದೇವಾಲಯ**

ಈ ದೇವಾಲಯ ಒಂದು ಐತಿಹಾಸಿಕ ಹಾಗೂ ಧಾರ್ಮಿಕವಾಗಿ ಮಹತ್ವದ್ದಾಗಿದೆ. 16ನೇ ಶತಮಾನದಲ್ಲಿ ಕೆಳದಿ ನಾಯಕರು ಕೋಟೆಯ ಮರುನಿರ್ಮಾಣ ಮಾಡಿದಂತಹ ಸಂದರ್ಭದಲ್ಲಿ ಈ ದೇವಾಲಯವನ್ನು ನಿರ್ಮಿಸಿರಬಹುದು. ಇಲ್ಲಿ ಲಿಂಗ ರೂಪದಲ್ಲಿ ಕಾಶಿ ವಿಶ್ವನಾಥನನ್ನು ಪೂಜಿಸಲಾಗುತ್ತದೆ. ಕಾಶಿ ಎಂಬ ಹೆಸರು ದೇವಾಲಯಗೆ ಪವಿತ್ರತೆಯನ್ನು ಮತ್ತು ಗಾಂಭೀರತೆಯನ್ನು ನೀಡುತ್ತದೆ. ಇದರ ವಾಸ್ತುಶಿಲ್ಪವನ್ನು ದೇವಾಲಯದ ಕಟ್ಟಡದ ಗೋಡೆಗಳ ಮೇಲೆ ನೋಡಬಹುದು. ಇದು ಕೆಳದಿ ರಾಜರ ಆಳ್ವಿಕೆಯ ಕಾಲದಲ್ಲಿ ದೇವಾಲಯದ ವಾಸ್ತುಶಿಲ್ಪದ ವೈಭವವನ್ನು ಪ್ರದರ್ಶಿಸುವ ದೇವಾಲಯವಾಗಿದೆ. ಅಲಂಕಾರದಲ್ಲಿ ಸರಳತೆ ಮತ್ತು ಸೊಬಗನ್ನು ಪ್ರದರ್ಶಿಸುವ ಈ ದೇವಾಲಯವು ಹೊರಗಿನ ಗೋಡೆಯ ಮೇಲೆ ಶಸ್ತ್ರಸಜ್ಜಿತ ಯೋಧರು, ಮೂರು ತಲೆಯ ಪಕ್ಷಿಗಳು, ಹಾವುಗಳು, ಸೂರ್ಯ, ಚಂದ್ರ ಮತ್ತು ಆನೆಗಳ ಕೆತ್ತನೆಗಳನ್ನು ಈ ದೇವಾಲಯದ ಗೋಡೆಗಳ ಮೇಲೆ ಕೆತ್ತಿರುವುದನ್ನು ಕಾಣಬಹುದು.

*** ಶಾಂತಗಂಗೆ ಕೊಳ**

ಕವಲೇದುರ್ಗ ಕೋಟೆಯಲ್ಲಿರುವ ಅರಮನೆ ಆವರಣದ ಹಿಂದೆ ಇರುವ ನೀರಿನ ಕೊಳ ಬಹಳ ಸುಂದರವಾಗಿದೆ. ಈ ಕೊಳದಲ್ಲಿ ಕೆತ್ತಲಾಗಿರುವ ಶಾಸನದಿಂದ ಇದರ ಹೆಸರು ಶಾಂತಗಂಗೆ ಎಂದು ತಿಳಿದುಬರುತ್ತದೆ. ಶಾಂತಗಂಗೆ ಕೊಳವು ನೋಡಲು ಅದ್ಭುತವಾಗಿದ್ದು ನಗರದ ದೇವಗಂಗೆ ಕೊಳದಂತೆ ನಿರ್ಮಿಸಲಾಗಿದೆ. ಆದರೆ ಅದರ ವಿಸ್ತೀರ್ಣಕ್ಕಿಂತ ಕಡಿಮೆ ಇದೆ. ಇದು ಕೋಟೆಯ ಅರಮನೆ ಅವಶೇಷದ ಹಿಂಭಾಗದಲ್ಲಿದೆ. ಇದು ರಾಣಿಯರ ಈಜು ಕೊಳ. ಈ ಕೊಳಕ್ಕೆ ನೀರು ಅಂತರ್ಗತವಾಗಿ ಬಂದು ಸಂಗ್ರಹವಾಗುತ್ತದೆ. ಈ ನೀರು ಮೇಲಿನ ಶಿಖರೇಶ್ವರ ದೇವಾಲಯದ ಕೆಳಗೆ ಒಂದು ಹಾಳಾದ ದೇವಾಲಯವಿದ್ದು ಅಲ್ಲಿ ಉಕ್ಕುತ್ತಿದ್ದ ಸ್ವಾಭಾವಿಕ ಬುಗ್ಗೆಯಿಂದ ಕೊಳವೆಯ ಮೂಲಕ ನೀರನ್ನು ಈ ಕೊಳಕ್ಕೆ ಹರಿಸಲಾಗುತ್ತಿತ್ತು. ಆದರೆ ಇದು ಕೂಡ ನಿರ್ವಹಣೆ ಇಲ್ಲದೆ ತನ್ನ ಸೌಂದರ್ಯವನ್ನು ಕಳೆದುಕೊಳ್ಳುತ್ತಿದೆ.

*** ಅರಮನೆಯ ಅವಶೇಷ**

ಐದನೇ ದ್ವಾರದ ನಂತರದಲ್ಲಿ ಕಂಡುಬರುವುದೇ ಈ ಅರಮನೆಯ ಅವಶೇಷ. ಕವಲೆದುರ್ಗ ಕೋಟೆಯ ಬೆಟ್ಟಗಳ ಮಧ್ಯದಲ್ಲಿ ಪ್ರಾಕೃತಿಕ ಸುಂದರತೆ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ. ಕವಲೆದುರ್ಗ ಕೋಟೆಯ ಅತ್ಯದ್ಭುತವಾಗಿತ್ತು, ಆದರೆ ಒಳಗೆ ಅರಮನೆ ಗೋಡೆಗಳು, ಕಂಬಗಳು ಪಾಳು ಬಿದ್ದಿವೆ. ಅಲ್ಲಲ್ಲಿ ತುಂಡು ತುಂಡಾಗಿ ಕಂಬಗಳು ಬಿದ್ದು ಹಾಳಾಗಿವೆ. ಕಲ್ಲಿನ ಗೋಡೆಗಳನ್ನು ಅಂದರೆ ಅರಮನೆಯ ಗೋಡೆಗಳು ದಟ್ಟವಾದ ಕಲ್ಲಿನಿಂದ ನಿರ್ಮಿಸಲಾಗಿದ್ದು, ಅವುಗಳ ಮೇಲೆ ಇರುವ ಶಿಲ್ಪಕಲೆಗಳು ಇನ್ನು ಕಾಣಿಸುತ್ತವೆ.  ಈ ಕೋಟೆಯೊಳಗೆ ಕೆಲವು ಪಾಳು ಬಿದ್ದ ದೇವಾಲಯಗಳು ಸಹ ಇವೆ. ಅವುಗಳು ಅಸ್ತವ್ಯಸ್ತವಾಗಿವೆ. ದನ ಕರುಗಳಿಗೆ ಇದ್ದ ನೀರಿನ ತೊಟ್ಟಿಲು ಮುರಿದು ಹೋಗಿವೆ. ಮಳೆ ಬಂದಾಗ ನೀರು ಹೋಗುವ ಕಾಲುವೆಗಳು ಮುಚ್ಚಿಹೋಗಿವೆ. ಮತ್ತು ಕೆರೆಗಳು ಕೂಡ ಮುಚ್ಚಿಹೋಗಿದೆ. ಇದರಿಂದ ಮಳೆಯೂ ಬಂದಾಗ ಕೋಟೆಯ ಸುತ್ತಲೂ ಅಲ್ಲಲ್ಲಿ ನೀರು ನಿಂತಿರುತ್ತದೆ. ಅರಮನೆಯ ಅವಶೇಷದ ಕೋಣೆಗಳ ಗೋಡೆಗಳು ಕೂಡ ಕುಸಿದು ಬಿದ್ದಿದೆ ಇದರಿಂದ ಅರಮನೆಯ ವೈಭವವು ಕಣ್ಮರೆಯಾಗಿದೆ. ಅರಮನೆಯೊಳಗೆ ಇರುವ ಮೆಟ್ಟಿಲುಗಳು ಹಾಳಾಗಿವೆ.

*** ಕೋಟೆಯ ದುರಸ್ತಿ**

ಕವಲೇದುರ್ಗ ಕೋಟೆಯು ಅನೇಕ ಶತಮಾನಗಳಿಂದ ನಿಂತು ಇತಿಹಾಸದ ಸಾಕ್ಷಿಯಾಗಿ ಉಳಿದಿದೆ. ಆದರೆ ಕಾಲಕಾಲಕ್ಕೆ ಈ ಕೋಟೆ ಹಳೆಯದಾಗಿ ನಾಶವಾಗುತ್ತಿರುವುದು ಕಂಡು ಬರುತ್ತದೆ. ಮಳೆ, ಗಾಳಿ, ಸೂರ್ಯನ ಕಿರಣಗಳು ಮತ್ತು ಮಾನವೀಯ ನಿರ್ಲಕ್ಷ್ಯದಿಂದಾಗಿ ಈ ಕೊಟ್ಟೆಯ ಸ್ಥಿತಿ ದಿನದಿಂದ ದಿನಕ್ಕೆ ಹದಗೇಡುತ್ತಿದೆ. ಸರ್ಕಾರ ಮತ್ತು ಪುರಾತತ್ವ ಇಲಾಖೆಗಳು ಈ ಕಾಮಗಾರಿಗೆ ಮುಂದಾಗಿ ಕೋಟೆಯ ದುರಸ್ತಿಯನ್ನು ಮಾಡಿ ಶಿಲ್ಪ ಕಲೆಗೆ ಧಕ್ಕೆ ಮಾಡದಂತೆ ಮತ್ತು ಅದರ ಮೂಲಕ ವೈಶಿಷ್ಟತೆಗಳನ್ನು ಕಾಪಾಡಿಕೊಳ್ಳುವ ರೀತಿಯಲ್ಲಿ ಮಾಡಬೇಕು. ಸ್ಥಳೀಯರು, ಐತಿಹಾಸಿಕ ತಜ್ಞರು ಹಾಗೂ ಶಿಲ್ಪಿಗಳು ಈ ಕಾರ್ಯದಲ್ಲಿ ಕೈಗೊಂಡು ಕೋಟೆಯ ದುರಸ್ತಿಯನ್ನು ಮಾಡಿ ಉತ್ತಮ ಫಲಿತಾಂಶ ನೀಡಿದರೆ ಕವಲೇದುರ್ಗ ಕೋಟೆಯು ಪ್ರವಾಸೋದ್ಯಮ ಕೇಂದ್ರವಾಗುತ್ತದೆ. ಈ ಕೋಟೆಯನ್ನು ಅಭಿವೃದ್ಧಿಪಡಿಸಿದರೆ ಇದು ಸ್ಥಳೀಯ ಆರ್ಥಿಕತೆಗೆ ಸಹ ಬೆಂಬಲವಾಗುತ್ತದೆ. ಯುವ ಪೀಳಿಗೆ ಇತಿಹಾಸದ ಜ್ಞಾನವು ದೊರೆಯುತ್ತದೆ. ಹೀಗಾಗಿ ಕವಲೇದುರ್ಗ ಕೋಟೆಯು ಕಾಲಕಾಲಕ್ಕೆ ನಾಶವಾಗುತ್ತಿರುವುದನ್ನು ತಪ್ಪಿಸಬೇಕು.

*** ರಸ್ತೆ**

ಈ ಕೋಟೆಗೆ ವರ್ಷಪೂರ್ತಿ ಅಪಾರ ಸಂಖ್ಯೆಯ ಪ್ರವಾಸಿಗರು ಆಗಮಿಸುತ್ತಾರೆ. ಅದರಲ್ಲೂ ಮಳೆಗಾಲದಲ್ಲಿ ಹೆಚ್ಚಾಗಿರುತ್ತದೆ. ಆದರೆ ಈ ಕೋಟೆಗೆ ಹೋಗುವ ಪ್ರಮುಖ ರಸ್ತೆಯ ಹದಗಿಟ್ಟಿದೆ

ಇದರಿಂದ ಕವಲೇದುರ್ಗ ಕೋಟೆಯನ್ನು ಹತ್ತುವ ಪ್ರವಾಸಿಗರಿಗೆ ಬಹಳಷ್ಟು ತೊಂದರೆಯಾಗುವಂತಹ ಪರಿಸ್ಥಿತಿ ಉಂಟಾಗಿದೆ. ಕೋಟೆಯನ್ನು ನೋಡುವುದಕ್ಕೆ ಸರಿಯಾದ ರಸ್ತೆ ವ್ಯವಸ್ಥೆ ಇಲ್ಲ. ಪ್ರಕೃತಿ ವಿಕೋಪಗಳಿಂದ ರಸ್ತೆ ಮಾರ್ಗ ಇನ್ನು ಹದಗೆಟ್ಟಿದೆ. ಹಿಂದಿನ ಕಾಲದಲ್ಲಿ ರಸ್ತೆ ನಿರ್ಮಾಣಕ್ಕೆ ಆನೆ, ಕುದುರೆಗಳನ್ನು ಬಳಸುತ್ತಿದ್ದರು. ಆದರೆ ಪ್ರಸ್ತುತ ತಂತ್ರಜ್ಞಾನ ಇದ್ದರು ರಸ್ತೆಯನ್ನು ಸರಿಪಡಿಸುವ ಪ್ರಯತ್ನವಾಗಿಲ್ಲ. ಮಳೆಗಾಲದಲ್ಲಿ ಮಳೆಯಿಂದ ರಸ್ತೆ ಇನ್ನೂ ಹಾಳಾಗುತ್ತಿದೆ. ಕವಲೇದುರ್ಗದಲ್ಲಿ ರಸ್ತೆ ನಿರ್ಮಾಣ ಮಾಡಿದರೆ ಅಧಿಕ ಮಟ್ಟದ ಪ್ರವಾಸಿಗಳು ಆಗಮಿಸಿದರೆ ಆ ಕೋಟೆಯು ಅಭಿವೃದ್ಧಿಯಾಗುತ್ತದೆ. ಈ ರಸ್ತೆಯ ಸುಧಾರಣೆಗೆ ಸರ್ಕಾರ, ಸ್ಥಳೀಯ ಗ್ರಾಮ ಪಂಚಾಯಿತಿ ಅಧಿಕಾರಿಗಳು, ಇಲಾಖೆ ಅಧಿಕಾರಿಗಳು, ಈ ಕಾರ್ಯಕ್ಕೆ ಮುಂದಾಗಬೇಕು. ರಸ್ತೆಯು ಅಭಿವೃದ್ಧಿಯಾದರೆ ಈ ಕೋಟೆಗೆ ಹೆಚ್ಚಿನ ಪ್ರಾಮುಖ್ಯತೆ ದೊರೆಯುತ್ತದೆ ಮತ್ತು ಪ್ರವಾಸೋದ್ಯಮ ತಾಣಕ್ಕೆ ಹೆಚ್ಚಿನ ಪ್ರವಾಸಿಗಳು ಆಗಮಿಸಿ ಈ ಸ್ಥಳವು ಅಭಿವೃದ್ಧಿಯನ್ನು ಹೊಂದುತ್ತದೆ.

*** ರಕ್ಷಣೆ**

ಇತಿಹಾಸ ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮದ ದೃಷ್ಟಿಯಿಂದ ಕೋಟೆಯ ರಕ್ಷಣೆಯು ಅವಶ್ಯಕ. ಕೋಟೆಯನ್ನು ರಕ್ಷಿಸುವ ಮೂಲಕ ಮೂಲ ಸ್ವರೂಪ ಮತ್ತು ಮಹತ್ವವನ್ನು ಕಾಪಾಡಿದರೆ ಮುಂದಿನ ತಲೆಮಾರಿಗೆ ನೋಡಲು ಸಹಾಯವಾಗುತ್ತದೆ. ಕವಲೇದುರ್ಗ ಕೋಟೆಯೊಳಗಿನ ಮತ್ತು ಹೊರಗಿನ ಭಾಗವನ್ನು ಸ್ವಚ್ಛಗೊಳಿಸಬೇಕು. ಕೋಟೆಯಲ್ಲಿ ಸವೆದು ಹೋಗಿರುವ ಗೋಡೆ ಮೆಟ್ಟಿಲುಗಳು ಮುರಿದು ಅವುಗಳನ್ನು ತುರ್ತು ರೀತಿಯಲ್ಲಿ ದುರಸ್ತಿಪಡಿಸಬೇಕು ಮತ್ತು ಕೋಟೆಯ ಪ್ರಾಚೀನ ಶಿಲ್ಪಗಳು, ಬರಹಗಳು, ಚಿತ್ರಕಲೆಯನ್ನು ಮುರಿದಿರುವುದನ್ನು ಸರಿಪಡಿಸಬೇಕು. ಕೋಟೆಯ ಸುತ್ತಲೂ ಆಕ್ರಮ ಕಟ್ಟಡಗಳನ್ನು ಮತ್ತು ಆವರಣದ ಒಳಗೆ ನಾಶಕಾರಿ ಚಟುವಟಿಕೆಗಳನ್ನು ತಡೆಗಟ್ಟುವ ಮೂಲಕ ಕೋಟೆಯನ್ನು ರಕ್ಷಣೆ ಮಾಡಬೇಕು. ಕೋಟೆಯ ಸ್ಥಿತಿಯನ್ನು ಆಗಾಗ ಪರಿಶೀಲನೆ ಮಾಡಬೇಕು.

ಕೋಟೆಯ ಪ್ರವೇಶದ ಬಾಗಿಲನ್ನು ಪುನರ್ ನಿರ್ಮಾಣ ಮಾಡಬೇಕು. ಕವಲೇದುರ್ಗ ಕೋಟೆಯು ಸಹಜವಾಗಿ ಬೆಟ್ಟದ ಮೇಲೆ ಇದೆ. ಇದರಿಂದ ಪರಿಸರ ಹಾನಿಯಾಗದಂತೆ ರಕ್ಷಣಾ ಕ್ರಮಗಳನ್ನು ರೂಪಿಸಬೇಕು. ಕೋಟೆಯ ರಕ್ಷಣೆಗೆ ಸಿಸಿಟಿವಿ ಕ್ಯಾಮೆರಾ ಗಳನ್ನು ಬಳಕೆ ಮಾಡಬೇಕು. ಇವುಗಳ ರಕ್ಷಣೆಗೆ ಪ್ರವಾಸಿಗರಿಗೆ ಕಠಿಣವಾದ ನಿಯಮಗಳನ್ನು ವಿಧಿಸಬೇಕು. ಕವಲೇದುರ್ಗ ಕೋಟೆಯು ಆರ್ಕಿಯೊಲಜಿಕಲ್ ಸರ್ವೇ ಆಫ್ ಇಂಡಿಯಾ ಇದರ ಮೇಲ್ವಿಚಾರಣೆಯಲ್ಲಿದ್ದು ಕೋಟೆಯ ಒಳಗಿನ ದೇವಾಲಯಗಳು, ಅರಮನೆ ಅವಶೇಷಗಳು ಮತ್ತು ಇತರ ಐತಿಹಾಸಿಕ ರಚನೆಗಳನ್ನು ಸಂರಕ್ಷಿಸಲು ಕ್ರಮಗಳನ್ನು ಕೈಗೊಂಡಿದೆ. ಕೋಟೆಯ ಪುನರ್ ನಿರ್ಮಾಣ ಕಾರ್ಯವನ್ನು ಕೇವಲ ಐತಿಹಾಸಿಕ ಸಂರಕ್ಷಣೆಯನಷ್ಟಲ್ಲದೆ ಪ್ರವಾಸೋದ್ಯಮವನ್ನು ಉತ್ತೇಜಿಸುವುದರೊಂದಿಗೆ ಸ್ಥಳೀಯ ಆರ್ಥಿಕತೆ ಸಹಕಾರಿ

ಆಗಬೇಕು. ಪ್ರಕೃತಿಯ ಮಧ್ಯೆ ಇರುವ ಈ ಕೋಟೆ ಪ್ರವಾಸಿಗರಿಗೆ ವಿಶಿಷ್ಟ ಅನುಭವವನ್ನು ನೀಡುತ್ತದೆ. ಕೋಟೆಯನ್ನು ರಕ್ಷಣೆ ಮಾಡುವ ಮೂಲಕ ಮುಂದಿನ ತಲೆಮಾರುಗಳಿಗೆ ಇದರ ಐತಿಹಾಸಿಕ ಹಿನ್ನೆಲೆಗಳು ದೊರೆಯಬಹುದು ಈ ಕಾರಣಗಳಿಂದ ಕೋಟೆಯನ್ನು ರಕ್ಷಣೆ ಮಾಡುವ ಕಾರ್ಯವನ್ನು ಕೈಗೊಳ್ಳಬೇಕು.

* **ಮಾರ್ಗದರ್ಶಕರ (ಗೈಡ್) ಕೊರತೆ**

ಕವಲೇದುರ್ಗ ಕೋಟೆಗೆ ಬೇಟಿ ನೀಡುವ ಪ್ರವಾಸಿಗಳಿಗೆ ಸ್ಥಳೀಯ ಮಾರ್ಗದರ್ಶಕರ ಕೊರತೆಯು ಒಂದು ಸಮಸ್ಯೆಯಾಗಿದೆ. ಈ ಕೋಟೆಯ ಐತಿಹಾಸಿಕ ಮಹತ್ವ ಮತ್ತು ನೈಸರ್ಗಿಕ ಸೌಂದರ್ಯವನ್ನು ಸಂಪೂರ್ಣವಾಗಿ ಅನುಭವಿಸಲು ಅನುಭವಿ ಮಾರ್ಗದರ್ಶಕರ ಸಹಾಯ ಇದಕ್ಕೆ ಮುಖ್ಯವಾಗಿರುತ್ತದೆ. ಮಾರ್ಗದರ್ಶಕರ (ಗೈಡ್) ಲಭ್ಯತೆಯನ್ನು ದೊರಕಿಸಿಕೊಳ್ಳಲು ಸ್ಥಳೀಯ ಪ್ರವಾಸಿ ಮಾಹಿತಿ ಕೇಂದ್ರ ಅಥವಾ ಹೋಟೆಲ್‌ಗಳ ಮೂಲಕ ಮಾಹಿತಿ ನೀಡುವುದು. ಇವುಗಳ ಮೂಲಕ ಇತರ ಪ್ರವಾಸಿ ವೇದಿಕೆಗಳಲ್ಲಿ ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ಗೈಡ್ಗಳನ್ನು ನೇಮಿಸಬೇಕು. ಯಾವುದೇ ಮಾರ್ಗದರ್ಶಕರ ಇಲ್ಲವಾದರೆ ಆನ್ಲೈನ್ ಮೂಲಕ ತಿಳಿದು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಕವಲೇದುರ್ಗ ಕೋಟೆಯಂತಹ ಐತಿಹಾಸಿಕ ಕಟ್ಟಡಗಳ ಸಂರಕ್ಷಣೆ ಮತ್ತು ಪ್ರಸೋದ್ಯಮ ಉತ್ತೇಜನಕ್ಕೆ ಸ್ಥಳೀಯ ಮಾರ್ಗದರ್ಶಕರ ಲಭ್ಯತೆ ಹೆಚ್ಚಿಸುವುದುದಾಗಿದೆ. ಪ್ರವಾಸಿಗಳ ಅನುಭವವನ್ನು ಸುಧಾರಿಸಲು ಸ್ಥಳೀಯ ಆಡಳಿತ ಮತ್ತು ಪ್ರವಾಸೋದ್ಯಮ ಇಲಾಖೆ ಈ ವಿಷಯದಲ್ಲಿ ಕ್ರಮ ತೆಗೆದುಕೊಳ್ಳುವುದು ಉತ್ತಮವಾಗಿದೆ.

ಕವಲೇದುರ್ಗ ಕೋಟೆಯು ತನ್ನ ಮಡಿಲಿನಲಿ ಸುಂದರ ದೇವಾಲಯ, ಕೆರೆಗಳು, ಶಾಸನಗಳು, ' ಸುಂದರವಾದ ಮೂರ್ತಿಶಿಲ್ಪ ಕೆತ್ತನೆಗಳು ಹೀಗೆ ಕವಲೇದುರ್ಗ ಕೋಟೆಯು ಪ್ರವಾಸಿಗರನ್ನು ಆಕರ್ಷಿಸಲು ಬೇಕಾದಂತಹ ಎಲ್ಲಾ ಅಂಶಗಳನ್ನು ತನ್ನಲ್ಲಿ ಸೆರೆಹಿಡಿದುಕೊಂಡಿದೆ ಎಂದು ಹೇಳಬಹುದು. ಕವಲೇದುರ್ಗ ಕೋಟೆಯು ಒಂದು ಉತ್ತಮ ಪ್ರವಾಸಿ ಸ್ಥಳವಾಗಿದ್ದು ಕೆಳದಿಗೆ ಬೇಕಾದಂತಹ ಮೂಲಭೂತ ಸೌಲಭ್ಯಗಳ ಬಗ್ಗೆಯೂ ಕೂಡ ಹೇಳಲು ಪ್ರಯತ್ನಿಸಿರುತ್ತೇನೆ. ಕವಲೇದುರ್ಗ ಕೋಟೆಯು ಹೋಗುವ ದಾರಿಯಲ್ಲಿ ಕವಲೇದುರ್ಗ ಕೋಟೆಗೆ ಹೊಗಲು ಪ್ರವಾಸಿಗಳಿಗೆ ಈ ಸ್ಥಳದ ಬಗ್ಗೆ ತಿಳಿಯಲು ಈ ಸ್ಥಳದಲ್ಲಿ ಒಂದು ನಾಮಫಲಕದ ಅವಶ್ಯಕತೆಯು ಅತ್ಯಗತ್ಯವಾಗಿದೆ.

ಇವುಗಳಲ್ಲದೆ ಅನೇಕ ಪಾಳು ಬಿದ್ದಿರುವ ಗುಡಿಗಳು, ಟಂಕಸಾಲೆ, ಕಲ್ಯಾಣಮಂಟಪಗಳು, ಪುರಾತನ ಗೋರಿಗಳು, ಜಲಕ್ರೀಡಾ ಕೊಳಗಳು, ಕೆರೆಗಳು, ದುರ್ಗದ ತಿಮ್ಮಣ್ಣನೆಂಬುವನು ಕಟ್ಟಿಸಿಕೊಟ್ಟ ಮಹಾಮಹತ್ತಿನ ಮಠ ಎಂದು ಕರೆಯುವ ವೀರಶೈವ ಮಠ ಹಾಗೂ ಗವಿಮಠವೆಂದು ಕರೆಯುವ ಪಾಳು ಬಿದ್ದಿರುವ ಮಠಗಳು, ಮಾಸ್ತಿಕಲ್ಲುಗಳು, ಎಣ್ಣೆ–ತುಪ್ಪದ ಬಾವಿಗಳು, ಅರಮನೆಯ ಅವಶೇಷಗಳು, ಕಲ್ಯಾಣಿಗಳು, ಮದ್ದುಗುಂಡುಗಳನ್ನು ಶೇಖರಿಸಿಡುತ್ತಿದ್ದ ಕೋಟೆಗಳು, ಕಾಲುವೆಯ ಅವಶೇಷಗಳು

ಮುಂತಾದವುಗಳನ್ನು ಇಂದಿಗೂ ಸಹ ನೋಡಬಹುದಾಗಿದೆ. ಇವುಗಳ ಬಗ್ಗೆ ಮಾಹಿತಿಯನ್ನು ನೀಡಲು ಮಾರ್ಗದರ್ಶಕರ ಅವಶ್ಯಕತೆಯು ಎದ್ದು ಕಾಣುತ್ತದೆ. ಕವಲೇದುರ್ಗ ಕೋಟೆಯ ಸಂಶೋಧನೆಯ ದೃಷ್ಟಿಯಿಂದ, ಅಧ್ಯಯನದ ದೃಷ್ಟಿಯಿಂದ ಮತ್ತು ಇಲ್ಲಿರುವ ಪ್ರತಿಯೊಂದು ಸ್ಥಳಗಳ ಬಗ್ಗೆ ತಿಳಿದುಕೊಳ್ಳಲು ಒಂದು ದಿನಗಳ ಸಮಯವು ಸಾಕಾಗುವುದಿಲ್ಲ. ಆದ್ದರಿಂದ ಪ್ರವಾಸಿಗರಿಗೆ ಉಳಿದುಕೊಳ್ಳಲು ಕೆಳದಿಯಲ್ಲಿ ಉತ್ತಮ ರೀತಿಯಲ್ಲಿ ಸಜ್ಜಾದಂತಹ ವಸತಿ ಗೃಹಗಳ ಅವಶ್ಯಕತೆಯಿದೆ. ಬಂದಂತಹ ಪ್ರವಾಸಿಗರಿಗೆ ಸಮಯಕ್ಕೆ ಸರಿಯಾಗಿ ಉತ್ತಮ ರೀತಿಯಲ್ಲಿ ಆಹಾರ ಸಿಗುವಂತಹ ಉಪಾಹಾರ ಮಂದಿರಗಳ ಅಗತ್ಯತೆಯು ಕಂಡುಬರುತ್ತದೆ ಮತ್ತು ಪರಿಸರದ ನೈರ್ಮಲ್ಯದ ದೃಷ್ಟಿಯಿಂದ ಕೆಳದಿಯಲ್ಲಿ ಒಂದು ಸಾರ್ವಜನಿಕ ಶೌಚಾಲಯಗಳ ಅವಶ್ಯಕತೆಯು ಇದೆ ಎಂದು ಹೇಳಬಹುದು. ಪ್ರಸ್ತುತ ಸರ್ಕಾರದ ನಿರ್ಲಕ್ಷ್ಯದಿಂದ ಈ ಕವಲೇದುರ್ಗ ಕೋಟೆಯ ಅಭಿವೃದ್ಧಿ ಕುಂಠಿತವಾಗುತ್ತಿದೆ. ಇದಕ್ಕೆ ಜನರಲ್ಲಿ ಕುಂದುತ್ತಿರುವ ಇತಿಹಾಸ ಪ್ರಜ್ಞೆಯೂ ಸಹ ಒಂದು ಕಾರಣವಾಗಿದೆ. ಪ್ರವಾಸೋದ್ಯಮದ ಬಗ್ಗೆ ಜನರಲ್ಲಿ ಅರಿವು ಹೆಚ್ಚಿಸುವ ಕಾರ್ಯಗಳಗಾಬೇಕು ಇದರಿಂದ ಕವಲೇದುರ್ಗವನ್ನು ಪ್ರವಾಸಿ ಆಕರ್ಷಣೆಯ ಕೇಂದ್ರವನ್ನಾಗಿ ಮಾಡಿ ಪ್ರವಾಸಿಗರ ಸಂಖ್ಯೆ ಹೆಚ್ಚು ಮಾಡಬಹುದು. ಇದರಿಂದ ಕೋಟೆ ಅಭಿವೃದ್ಧಿಯ ಪಥದ ಕಡೆ ಸಾಗುತ್ತದೆ.

**ಪರಾಮರ್ಶನ ಗ್ರಂಥಗಳು**

1. ಕಲಬುರ್ಗಿ,ಎಂ.ಎಂ.–'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ',ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು.2002.

2.ಕೆಳದಿ ಗುಂಡಾಜೋಯಿಸ್.–'ಇಕ್ಕೇರಿಯ ಐತಿಹಾಸಿಕ ಹಿನ್ನೆಲೆ',ಕೆಳದಿ ವಸ್ತು ಸಂಗ್ರಹಾಲಯ,ಕೆಳದಿ. 1975.

3. ಕೆಳದಿ ವೆಂಕಟೇಶ ಜೋಯಿಸ್.– 'ಕೆಳದಿ ಅರಸರ ಶಾಸನ ಸಂಪುಟ', ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ. 1991.

4. ಕೆಳದಿ ವೆಂಕಟೇಶ ಜೋಯಿಸ್.– 'ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 1996.

5. ಕೆಳದಿ ವೆಂಕಟೇಶ ಜೋಯಿಸ್. –'ಕೆಳದಿ ಸಂಸ್ಥಾನ', ಶ್ರೀ ಸರಸ್ವತಿ ಸೇವಾ ಸಮಿತಿ, ಕೆಳದಿ. 2000.

6. ಕೆಳದಿ ವೆಂಕಟೇಶ ಜೋಯಿಸ್. 'ಮರೆಯಲಾಗದ ಕೆಳದಿ ಸಾಮ್ರಾಜ್ಯ', ಶ್ರೀ ಸರಸ್ವತಿ ಸೇವಾ ಸಮಿತಿ, ಕೆಳದಿ. 2008.

7. ನಾಗೇಗೌಡ,ಎಚ್.ಎಲ್.–'ಪ್ರವಾಸಿ ಕಂಡ ಭಾರತ', ಸಂಪುಟ 4–5, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು. 1974.

8. ರೈಸ್, ಬಿ.ಎಲ್. 'ಎಫಿಗ್ರಾಫಿಯ ಕರ್ನಾಟಿಕ', ಸಂಪುಟ–8, ಮೈಸೂರು ಗೌರ್ನಮೆಂಟ್ ಸೆಂಟ್ರಲ್ ಪ್ರೆಸ್, ಬೆಂಗಳೂರು. 1894.

9. ಸುಂದರ, ಅ. –'ಕೆಳದಿ ಅರಸರ ಕಾಲದ ವಾಸ್ತು ಮತ್ತು ಮೂರ್ತಿಶಿಲ್ಪ–1', ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು. 1986.